S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 95/2021

**ಚಾ.ಸಾ.-7 ಪ್ರಾ.ಸಾ.-6**

| | |
|---|---|
| **ಸಾಕ್ಷಿದಾರರ ಹೆಸರು** | **ಸುರೇಶ್** |
| **ತಂದೆಯ/ಗಂಡನ ಹೆಸರು** | **ಸಿದ್ದಯ್ಯ** |
| **ವಯಸ್ಸು** | **50 ವರ್ಷಗಳು** |
| **ಉದ್ಯೋಗ** | **ವ್ಯವಸಾಯ** |
| **ವಾಸ** | **ಹಾದನೂರು ಗ್ರಾಮ** |

**ದಿನಾಂಕಃ 22-08-2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ-1 ರವರ ಪರಿಚಯ ನನಗೆ ಇದೆ. ಅವರು ಪರಿಶಿಷ್ಟ ಜಾತಿಯ ಜನಾಂಗಕ್ಕೆ ಸೇರಿದವರು. ನನಗೆ ಆರೋಪಿತರ ಪರಿಚಯ ಇದ್ದಾರೆ. ಅವರು ಒಕ್ಕಲಿಗರು. ನಾನು ಒಕ್ಕಲಿಗ. ಈಗ ನನಗೆ ತೋರಿಸುತ್ತಿರುವ ನಿಪಿ 2 ರಲ್ಲಿರುವ ಸಹಿ ನನ್ನದು. ಸಹಿಯನ್ನು ನಿಪಿ 2-ಸಿ ಎಂದು ಗುರುತಿಸಲಾಯಿತು. ನಿಪಿ 3 ಭಾವ ಚಿತ್ರದಲ್ಲಿ ನಾನು ಇದ್ದೇನೆ. ನಾನು ಮತ್ತು ಚಾಸಾ 1 ಹಾಗೂ 6 ರವರು ಭಾವಚಿತ್ರದಲ್ಲಿ ಕಂಡು ಬರುತ್ತಾರೆ. ಅದನ್ನು ನಮ್ಮ ಊರಿನ ಬಸ್ ನಿಲ್ದಾಣದ ಬಳಿ ತೆಗೆಯಲಾಗಿದೆ. ಮತ್ತೊಂದು ಭಾವಚಿತ್ರವನ್ನು ಚಾಸಾ 6 ರವರ ಅಂಗಡಿಯ ಬಳಿ ತೆಗೆಯಲಾಗಿದೆ. ಈಗ್ಗೆ 5 ವರ್ಷಗಳ ಹಿಂದೆ ಚಾಸಾ 6 ಅಂಗಡಿ ಬಳಿ ನಿಪಿ 2 ಕ್ಕೆ ಸಹಿ ಮಾಡಿದ್ದೇನೆ. ಅದನ್ನು ಪೊಲೀಸರು ಸ್ಥಳ ಮಹಜರ್ ಮಾಡಲು ಬಂದಾಗ ಮಾಡಿರುತ್ತೇನೆ. ಅದು ಹೊಡೆದಾಟಕ್ಕೆ ಸಂಬಂಧಿಸಿದಂತೆ ಬಂದಿದ್ದಾರೆ . ಅದು ಯಾರು ನಡುವೆ ಅಂತ ನನಗೆ

ಗೊತ್ತಿಲ್ಲ. ಚಾಸಾ 1 ರವರು ಸ್ಥಳ ತೋರಿಸಿಕೊಟ್ಟಿದ್ದಾರೆ. ಸ್ಥಳದಿಂದ ಪೊಲೀಸರು ಏನು ತೆಗೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಎಂ ಒ 1 ರಿಂದ 3 ನ್ನು ಪೊಲೀಸರಿಗೆ ಯಾರು ಕೊಟ್ಟಿದ್ದಾರೆ ಗೊತ್ತಿಲ್ಲ. ಅವುಗಳಿಗೆ ಮತ್ತು ಈ ಪ್ರಕರಣಕ್ಕೆ ಏನು ಸಂಬಂಧ ಗೊತ್ತಿಲ್ಲ. ಮಹಜರ್ ನಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಸ್ವಾಮೀಗೌಡರವರ ಅಂಗಡಿಯ ಮುಂದೆ ಚಾಸಾ 1 ರವರು ಇದೆ ಜಾಗದಲ್ಲಿ ಆರೋಪಿತರು ನನಗೆ ಹಲ್ಲೆ ಮಾಡಿದ್ದಾರೆ ಮತ್ತು ನನ್ನ ಬಟ್ಟೆಗಳನ್ನು ಹರಿದಿದ್ದಾರೆ ಎಂದು ಪೊಲೀಸರಿಗೆ ತೋರಿಸಿಕೊಟ್ಟರು ಎಂದರೆ ಸರಿಯಲ್ಲ. ಅಲ್ಲದೇ ನ್ಯಾಯಾಲಯದ ಮುಂದೆ ಎಂ ಒ 1 ಮತ್ತು 2 ನ್ನು ಚಾಸಾ 1 ರವರು ತನಿಖಾಧಿಕಾರಿಗೆ ಹಾಜರು ಪಡಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ನನ್ನ ಸಮಕ್ಷಮ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಅಲ್ಲದೆ ಅಲ್ಲಿಂದ 35 ಅಡಿ ದೂರದಲ್ಲಿ ಅಂದರೆ ಹಿರಿಯ ಪ್ರಾಥಮಿಕ ಶಾಲೆ ಮುಂಭಾಗದಲ್ಲಿ ಜಾಗವನ್ನು ತೋರಿಸಿ ಆರೋಪಿತರು ಅವರನ್ನು ಕೆಳಗೆ ಕೆಡವಿಕೊಂಡು ಕಾಲಿನಿಂದ ತುಳಿದು ಕಲ್ಲಿನಿಂದ ಹೊಡೆದರು ಎಂದು ಸ್ಥಳ ತೋರಿಸಿಕೊಟ್ಟರು ಎಂದರೆ ಸರಿಯಲ್ಲ. ಅಲ್ಲದೆ ಅಲ್ಲೆ ಬಿದ್ದಿದ್ದ ಹಲ್ಲೆಗೆ ಉಪಯೋಗಿಸಿದ ಕಲ್ಲನ್ನು ಪೊಲೀಸರಿಗೆ ಚಾಸಾ 1 ರವರು ಹಾಜರು ಮಾಡಿದರು ಎಂದರೆ ಸರಿಯಲ್ಲ. ಅದನ್ನು ಕೂಡಾ ಪೊಲೀಸರು ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿಕೊಂಡರು ಎಂದರೆ ಸರಿಯಲ್ಲ. ನಂತರ 11 ರಿಂದ 12 ರ ವರೆಗೆ ನಿಪಿ 2 ರಂತೆ ಸ್ಥಳ ಮಹಜರ್ ಬರೆದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ 3 ನ್ನು ತೆಗೆಯಲಾಗಿರುತ್ತದೆ ಎಂದರೆ ಸಾಕ್ಷಿದಾರರು ಭಾವಚಿತ್ರ ತೆಗೆದಿರುವುದು ಸತ್ಯವೆನ್ನುತ್ತಾರೆ. ದಾಖಲೆಗಳನ್ನು ಓದಿ ತಿಳಿದು ನಾನು ಸಹಿ ಮಾಡಿದ್ದೇನೆ ಎಂದರೆ

ಸರಿಯಲ್ಲ. ಆರೋಪಿತರ ಜೊತೆ ನಾನು ಅನ್ಯೋನ್ಯವಾಗಿದ್ದೇನೆ ಎಂದರೆ ಸರಿ . ಆದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಸಹಿ ಮಾಡಿದ ದಿನಾಂಕ ನನಗೆ ಗೊತ್ತಿಲ್ಲ. ನಾನು ಚಾಸಾ 1 ರವರ ಜೊತ ಚೆನ್ನಾಗಿದ್ದೇನೆ. ನಾನು ಪೊಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ